# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

## ಶುದ್ಧ ಕ್ರಯಪತ್ರ

ಸನ್ 200 ದ ಇಸವಿ____________________ತಿಂಗಳು ___________________________ ದಿನಾಂಕದಂದು ಮೊದಲನೆಯ ಪಕ್ಷಕಾರರಾದ ಈ ಪತ್ರದಲ್ಲಿ ಇನ್ನು ಮುಂದೆ ಮಾರಾಟಗಾರರು(ಮಾರಾಟಗಾರರು ಶಬ್ದವು ಅವರ ಉತ್ತರಾಧಿಕಾರಿಗಳು, ಹಸ್ತಾಂತರಣಕಾರರು ಮುಂತಾದವರನ್ನು ಒಳಗೊಳ್ಳುತ್ತದೆ) ಎಂದು ಕರೆಯಲಾಗಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇದನ್ನು ಪ್ರತಿನಿಧಿಸುವ ಅದರ ಉಪ ಕಾರ್ಯದರ್ಶಿಯವರು ಎರಡನೆಯ ಪಕ್ಷಕಾರರಾದ ಈ ಪತ್ರದಲ್ಲಿ ಇನ್ನು ಮುಂದೆ ಖರೀದಿದಾರ (ಖರೀದಿದಾರ ಎಂಬ ಶಬ್ದವು ಆತನ / ಆಕೆಯ ವಾರಸುದಾರರು, ಉತ್ತರಾಧಿಕಾರಿಗಳು ಮತ್ತು ಹಸ್ತಾಂತರಣಕಾರರು ಮುಂತಾದವರನ್ನು ಒಳಗೊಳ್ಳುತ್ತದೆ) ಎಂದು ಕರೆಯಲಾಗಿರುವ____________________ ____________________________________________________________________________ ಎಂಬಲ್ಲಿ ವಾಸವಾಗಿರುವ ಶ್ರೀ ___________________________________ಎಂಬುವವರ ಮಗನಾದ / ಮಗಳಾದ /ಹೆಂಡತಿಯಾದ ಸುಮಾರು ________________ವರ್ಷ ವಯಸ್ಸಿನ ಶ್ರೀ/ಶ್ರೀಮತಿ _____________________________________ ಎಂಬುವವರಿಗೆ ಬರೆದು ಕೊಟ್ಟ ಶುದ್ಧ ಕ್ರಯಪತ್ರದ ಕ್ರಮವೇನೆಂದರೆ :

ಮಾರಾಟಗಾರರಾದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಪ್ರತಿನಿಧಿಸುವ ಉಪಕಾರ್ಯದರ್ಶಿಯವರು ಆ ಸಾಮರ್ಥ್ಯದಲ್ಲಿ ಷೆಡ್ಯೂಲ್ ಸ್ವತ್ತನ್ನು ಖರೀದಿದಾರರಿಗೆ ಮಾರಾಟ ಮಾಡಿದ್ದು, ಖರೀದಿದಾರರು (ಎರಡನೆಯ ಪಕ್ಷಕಾರರು) ಷೆಡ್ಯೂಲ್ ನಿವೇಶನದ ಪೂರ್ಣ ಬೆಲೆಯಾದ_________________________________ರೂಪಾಯಿಗಳನ್ನು(________________________ ___________________________________________________ ರೂಪಾಯಿಗಳು) ಪಾವತಿ ಮಾಡಿರುತ್ತಾರೆ ಮತ್ತು ________________________________ ಸಬ್ ರಿಜಿಸ್ಟ್ರಾರ್‌ರವರ ಕಚೇರಿಯಲ್ಲಿ ___________________ ದಿನಾಂಕದಂದು _________________ ಪುಸ್ತಕದ________________ ಸಂಪುಟದ______________________ ರಿಂದ______________ ಪುಟಗಳಲ್ಲಿ _________________________ ಸಂಖ್ಯೆಯಾಗಿ ನೋಂದಾಯಿಸಲಾಗಿರುವ ಗುತ್ತಿಗೆ ಹಾಗೂ ಮಾರಾಟ ಒಪ್ಪಂದ ಪತ್ರವನ್ನು ಬರೆದು ಕೊಡಲಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಉಪ ಕಾರ್ಯದರ್ಶಿಯವರು ನಿವೇಶನದ ಸ್ವಾಧೀನತೆಯನ್ನು ಖರೀದಿದಾರರಿಗೆ ವಹಿಸಿಕೊಟ್ಟಿರುತ್ತಾರೆ.

ಖರೀದಿದಾರರು ಸದರಿ ನಿವೇಶನದಲ್ಲಿ ಕಟ್ಟಡವನ್ನು ಕಟ್ಟಿದ್ದಾರೆ/ ಕಟ್ಟುವವರಿದ್ದಾರೆ. ಮಾರಾಟಗಾರರು ಖರೀದಿದಾರರೊಂದಿಗೆ ಈ ಮೂಲಕ ಈ ಮುಂದಿನಂತೆ ಒಡಂಬಡಿಕೆ ಮಾಡಿಕೊಳ್ಳುತ್ತಾರೆ:-

1. ಈ ಸಂಬಂಧ ಸರ್ಕಾರವು ಹೊರಡಿಸಿರುವ ಆದೇಶಗಳ ಅನುಸಾರವಾಗಿ ಮತ್ತು ಸದರಿ ನಿವೇಶನದ ಪೂರ್ಣ ಬೆಲೆಯನ್ನು ಖರೀದಿದಾರರು ಪಾವತಿ ಮಾಡಿರುವುದನ್ನು ಪರಿಗಣಿಸಿ ಸದರಿ ಸ್ವತ್ತಿನ ಪೂರ್ಣ ಮತ್ತು ಏಕೈಕ ಹಕ್ಕುದಾರರಾದ ಮಾರಾಟಗಾರರು ಈ ಪತ್ರದ ಷೆಡ್ಯೂಲ್‌ನಲ್ಲಿ ಹೆಚ್ಚು ನಿರ್ದಿಷ್ಟವಾಗಿ ಮತ್ತು ವಿಶದವಾಗಿ ವಿವರಿಸಲಾಗಿರುವ ____________________________ ಬಡಾವಣೆಯ__________________________ ವಿಭಾಗದಲ್ಲಿರುವ ನಿವೇಶನ ಸಂಖ್ಯೆ____________________________ ರ ಪೂರ್ಣ ಅಧಿಕಾರ, ಹಕ್ಕು ಮತ್ತು ಹಿತಾಸಕ್ತಿಯನ್ನು ಈ ಕ್ರಯ ಪತ್ರದ ಮೂಲಕ ಖರೀದಿದಾರರಿಗೆ ಈ ಮೂಲಕ ವಹಿಸಿಕೊಟ್ಟಿದ್ದಾರೆ ಮತ್ತು ವರ್ಗಾಯಿಸಿದ್ದಾರೆ. ಖರೀದಿದಾರರು ಸದರಿ ನಿವೇಶನದ

ಸಂಪೂರ್ಣ ಮಾಲೀಕರಾಗಿ ಅದನ್ನು ಹೊಂದಿ ಅನುಭವಿಸಿಕೊಂಡು ಹೋಗತಕ್ಕದ್ದು ಮತ್ತು ಖರೀದಿದಾರರಿಗೆ ಸದರಿ ನಿವೇಶನದ ವಾಸ್ತವಿಕ ಸ್ವಾಧೀನತೆಯನ್ನು ______________________ರಂದು ನೀಡಲಾಗಿದೆ.

2. ಎರಡನೆಯ ಪಕ್ಷಕಾರರು ಈ ಮುಂದಿನ ಷರತ್ತಿಗೊಳಪಟ್ಟು ಷೆಡ್ಯೂಲ್ ನಿವೇಶನದ ಸ್ವಾಮ್ಯವನ್ನು ಹೊಂದಿ ಅದರಿಂದ ಬರುವ ಬಾಡಿಗೆ ಮತ್ತು ಲಾಭ ಮುಂತಾದವುಗಳನ್ನು ಅನುಭವಿಸಿಕೊಂಡು ಹೋಗತಕ್ಕದ್ದು.

(1) ಸದರಿ ನಿವೇಶನದಲ್ಲಿ ಕಟ್ಟಿರುವ / ಕಟ್ಟುವ ಕಟ್ಟಡವನ್ನು ಪೂರ್ಣವಾಗಿ ಮಾನವ ವಾಸಕ್ಕಾಗಿ ಬಳಸತಕ್ಕದ್ದು. ಅಂಗಡಿಯಾಗಿ ಅಥವಾ ಕಟ್ಟಡವಾಗಿ ಅಥವಾ ಮನೆಯಾಗಿ ಅಥವಾ ಯಾಂತ್ರಿಕ ಶಕ್ತಿಯಿಂದ ಅಥವಾ ಬೇರೆ ರೀತಿಯಿಂದ ತಯಾರಿಕಾ ಕಾರ್ಯಗಳನ್ನು ನಡೆಸಲಾಗುತ್ತಿರುವ ಕಟ್ಟಡವಾಗಿ ಬಳಸುವಂಥ ಯಾವುದೇ ಭಾಗಗಳನ್ನು ಸದರಿ ಕಟ್ಟಡಕ್ಕೆ ಹೊಂದಿಕೊಂಡಂತೆ ಅಥವಾ ಹೊಂದಿಕೊಂಡಿರದಂತೆ ನಿರ್ಮಾಣ ಮಾಡತಕ್ಕದ್ದಲ್ಲ.

# ಷೆಡ್ಯೂಲ್

__________________________________________________ ಬಡಾವಣೆಯ______________________ ವಿಭಾಗದಲ್ಲಿರುವ ________________________________ ಸಂಖ್ಯೆಯುಳ್ಳ ಪೂರ್ವ ಪಶ್ಚಿಮ ___________________ ಚ.ಅ./ಚ.ಮೀ ಉತ್ತರ ದಕ್ಷಿಣ _________________________ ಚ.ಅ./ಚ.ಮೀ ಒಟ್ಟು_____________________ಚ.ಅ./ ಚ.ಮೀ ವಿಸ್ತೀರ್ಣ ಉಳ್ಳ ನಿವೇಶನವನ್ನು ಮತ್ತು ಭೂಮೇಲ್ಮೈನ ಕೆಳಭಾಗಕ್ಕೆ ಅಥವಾ ಮೇಲ್ಭಾಗಕ್ಕೆ ಸಂಬಂಧಿಸಿದ ಯಾವುದೇ ರೀತಿಯ ಸಕಲ ಹಕ್ಕುಗಳನ್ನು, ಉಪ ಹಕ್ಕುಗಳನ್ನು ಒಳಗೊಂಡ ಸ್ವತ್ತಿನ ಚಕ್ಕುಬಂದಿ.

ಪೂರ್ವಕ್ಕೆ : ಪಶ್ಚಿಮಕ್ಕೆ :

ಉತ್ತರಕ್ಕೆ : ದಕ್ಷಿಣಕ್ಕೆ :

ಇದಕ್ಕೆ ಸಾಕ್ಷಿಯಾಗಿ ಮಾರಾಟಗಾರರು ಬೆಂಗಳೂರಿನಲ್ಲಿ ಮೇಲೆ ತಿಳಿಸಿದ ದಿನಾಂಕ ತಿಂಗಳು ವರ್ಷದಂದು ತಮ್ಮ ಸಹಿಯನ್ನು ಹಾಕಿರುತ್ತಾರೆ.

**ಸಾಕ್ಷಿದಾರರು :**

1.

2.

ಉಪ ಕಾರ್ಯದರ್ಶಿ

**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ**

ಬೆಂಗಳೂರು